# ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

**ದಿನಾಂಕ: 10.09.2025 ರಂದು ಬುಧವಾರ ಬೆಳಗ್ಗೆ 11.00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ನಡವಳಿಗಳು:**

**ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು/ಸದಸ್ಯರು**

| | | |
|---|---|---|
| 1. | ಪ್ರೊ. ಶಿವಾನಂದ ಕೆಳಗಿನಮನಿ, ಕುಲಪತಿಗಳು | : ಅಧ್ಯಕ್ಷರು |
| 2. | ಡಾ. ಸುಯಮೀಂದ್ರ ಕುಲಕರ್ಣಿ (ಡೀನರು) | : ಸದಸ್ಯರು |
| 3. | ಪ್ರೊ. ಪಾರ್ವತಿ ಸಿ. ಎಸ್., (ಡೀನರು) | : ಸದಸ್ಯರು |
| 4. | ಪ್ರೊ. ಪಿ. ಭಾಸ್ಕರ್, (ಡೀನರು) | : ಸದಸ್ಯರು |
| 5. | ಡಾ. ವೆಂಕಟೇಶ. ಕೆ., (ಡೀನರು) | : ಸದಸ್ಯರು |
| 6. | ಡಾ. ಲತಾ ಎಂ.ಎಸ್., (ಡೀನರು) | : ಸದಸ್ಯರು |
| 7. | ಡಾ. ಯಂಕಣ್ಣ | : ಸದಸ್ಯರು (ಆನ್‌ಲೈನ್) |
| 8. | ಡಾ. ಸಿದ್ದಪ್ಪ | : ಸದಸ್ಯರು |
| 9. | ಡಾ. ಎಮ್ ವಾರಿಸ್ | : ಸದಸ್ಯರು (ಆನ್‌ಲೈನ್) |
| 10. | ಶ್ರೀ. ಪರ್ವತರೆಡ್ಡಿ | : ಸದಸ್ಯರು |
| 11. | ಡಾ. ಚನ್ನಬಸಪ್ಪ ಮೇಟಿ | : ಸದಸ್ಯರು |
| 12. | ಡಾ. ಈರಣ್ಣ ಪೂಜಾರಿ | : ಸದಸ್ಯರು |
| 13. | ಶ್ರೀ. ಸತ್ಯನಾರಾಯಣ | : ಸದಸ್ಯರು |
| 14. | ಶ್ರೀ. ಅನಿಲಕುಮಾರ ರಾಜಣ್ಣ, | : ಸದಸ್ಯರು |
| 15. | ಡಾ. ಈರಣ್ಣ. ಜೆ | : ಸದಸ್ಯರು |
| 16. | ಶ್ರೀ. ಶೇಖಪ್ಪ. ಬಿ. ರ್‍ಯಾಖಾ | : ಸದಸ್ಯರು |
| 17. | ಡಾ. ಜಿ. ಎಸ್. ಬಿರಾದಾರ, ಗ್ರಂಥಪಾಲಕರು | : ಸದಸ್ಯರು |
| 18. | ಶ್ರೀಮತಿ. ಗಾಯಿತ್ರಿ ಕೆ.ಎಸ್.ಎ.ಎಸ್., ಹಣಕಾಸು ಅಧಿಕಾರಿಗಳು | : ಸದಸ್ಯರು |
| 19. | ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) | : ಸದಸ್ಯರು |
| 20. | ಡಾ. ಎ. ಚನ್ನಪ್ಪ ಕೆ.ಎ.ಎಸ್., ಕುಲಸಚಿವರು (ಆಡಳಿತ) | : ಸದಸ್ಯ ಕಾರ್ಯದರ್ಶಿಗಳು |

ಮೊದಲಿಗೆ ಕುಲಸಚಿವರು ಸಭೆಯ ಕೋರಮ್ ಖಚಿತ ಪಡಿಸಿಕೊಂಡು, ಸಭಾಧ್ಯಕ್ಷರಾದ ಪ್ರೊ. ಶಿವಾನಂದ ಕೆಳಗಿನಮನಿ ಗೌರವಾನ್ವಿತ ಕುಲಪತಿಗಳು ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸುತ್ತ ಸಭಾಧ್ಯಕ್ಷರ ಅನುಮತಿಯೊಂದಿಗೆ ವಿದ್ಯಾವಿಷಯಕ ಪರಿಷತ್ ಸಭೆಯನ್ನು ಆರಂಭಿಸಲಾಯಿತು.

**ವಿಷಯ ಕ್ರಮಾಂಕ (1) :**

ದಿನಾಂಕ 14.05.2025 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಕುರಿತು.

**ನಿರ್ಣಯ:** ಸದರಿ ನಡಾವಳಿಗಳನ್ನು ಗಮನಿಸಿದ ಸಭೆಯು ಯಾವುದೇ ತಿದ್ದುಪಡಿಗಳಿಲ್ಲದೆ ದೃಢೀಕರಿಸಿತು.

**ವಿಷಯ ಕ್ರಮಾಂಕ (2) :**

2025–26ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಪದವಿಯ ಪ್ರವೇಶಾತಿಯಲ್ಲಿ M.Sc. (Electronics and Instrumentation) ಅರ್ಹತೆಯ ಮಾನದಂಡಗಳ ಅನುಮೋದನೆ ಕುರಿತು.

**ನಿರ್ಣಯ:** ಈ ವಿಷಯ ಕುರಿತು ಚರ್ಚಿಸಲಾಗಿ ಸಭೆಯಲ್ಲಿ ಮಂಡಿಸಲಾದ M.Sc.(Electronics and Instrumentation) ಸ್ನಾತಕೋತ್ತರ ಪದವಿಯ ಪ್ರವೇಶಾತಿಗೆ ಈ ಕೆಳಕಂಡ ಅರ್ಹತೆಯನ್ನು 2025–26ನೇ ಶೈಕ್ಷಣಿಕ ಸಾಲಿನಿಂದ ಅನ್ವಯಿಸುವಂತೆ ಸರ್ವಾನುಮತದಿಂದ ಅನುಮೋದಿಸಿತು.

| Sl. No. | Name of PG Course/ Program | Eligibility |
|---|---|---|
| 1. | M.Sc.( Electronics and Instrumentation) | B.Sc. Degree with the Physics/ Mathematics/ Electronics/Computer Science/ Instrumentation as an optional subject<br>OR<br>BCA Graduate with the Physics and Mathematics at the PUC/10+2/ Diploma (Electronics/ Electrical/ Instrumentation/ Mechatronics / AI & ML/ Medical Electronics/ Computer Science/ Telecommunications) or equivalent<br>OR<br>B.E./ B.Tech.( Electronics/ Electrical/ Instrumentation/ Mechatronics / AI & ML/ Medical Electronics/ Computer Science/Telecommunications) or equivalent |

**ವಿಷಯ ಕ್ರಮಾಂಕ (3) :**

ವಿವಿಧ ಅಧ್ಯಯನ ಪೀಠಗಳ ಸ್ಥಾಪನೆಗಾಗಿ ಪರಿನಿಯಮಾವಳಿ (Statute Committee) ರಚಿಸುವ ಕುರಿತು.

**ನಿರ್ಣಯ:** ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ ಇಲ್ಲಿಯವರೆಗೆ ಯಾವುದೇ ಅಧ್ಯಯನ ಪೀಠ/ಕೇಂದ್ರವನ್ನು ಸ್ಥಾಪಿಸಲಾಗಿರುವುದಿಲ್ಲ. ಪ್ರಸ್ತುತ, ವಿಶ್ವವಿದ್ಯಾನಿಲಯದಲ್ಲಿ ಕೆಲವು ಅಧ್ಯಯನ ಪೀಠಗಳನ್ನು ಸ್ಥಾಪಿಸಲು ಸಾರ್ವಜನಿಕ ಹಾಗೂ ಸಂಘ ಸಂಸ್ಥೆಗಳಿಂದ ಸ್ವೀಕೃತವಾದ ಮನವಿಯ ಹಿನ್ನೆಲೆಯಲ್ಲಿ ಈ ಕೆಳಗಿನ ಏಳು ಅಧ್ಯಯನ ಪೀಠಗಳನ್ನು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಯಿತು.

| ಕ್ರ ಸಂ. | ಉದ್ದೇಶಿತ ಅಧ್ಯಯನ ಪೀಠ/ಕೇಂದ್ರ | ಅಗತ್ಯ ಅನುದಾನ (ರೂ.ಲಕ್ಷ) |
|---|---|---|
| 1 | ಹರಿದಾಸ ಸಾಹಿತ್ಯ ಅಧ್ಯಯನ ಪೀಠ | 250 |
| 2 | ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಪೀಠ ಹಾಗೂ ಸಂಶೋಧನೆ ವಿಸ್ತೀರ್ಣ ಕೇಂದ್ರ | 250 |
| 3 | ಡಾ. ಬಾಬು ಜಗಜೀವನರಾಮ್ ಅಧ್ಯಯನ ಪೀಠ ಹಾಗೂ ಸಂಶೋಧನೆ ವಿಸ್ತೀರ್ಣ ಕೇಂದ್ರ | 250 |
| 4 | ಮಹರ್ಷಿ ವಾಲ್ಮೀಕಿ ಅಧ್ಯಯನ ಪೀಠ | 250 |
| 5 | ಕನಕದಾಸ ಅಧ್ಯಯನ ಪೀಠ | 250 |
| 6 | ಜ್ಞಾನಜ್ಯೋತಿ ಶ್ರೀ ಬಸವೇಶ್ವರ ಅಧ್ಯಯನ ಪೀಠ | 250 |
| 7 | ಶ್ರೀ ಮಾದಾರ ಚನ್ನಯ್ಯ ಅಧ್ಯಯನ ಪೀಠ | 250 |
| | **ಒಟ್ಟು** | **1750** |

ಸರ್ಕಾರದ ನಿರ್ದೇಶನದಂತೆ ಹಾಗೂ ಪ್ರೊ. ಓ. ಅನಂತರಾಮಸ್ವಾಮಿ ಸಮಿತಿ ಇದರ ಶಿಫಾರಸ್ಸಿನಂತೆ ಮೇಲಿನ ಒಟ್ಟು ಏಳು ಅಧ್ಯಯನ ಪೀಠಗಳ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಮಾತೃ ವಿಶ್ವವಿದ್ಯಾಲಯವಾದ ಗುಲಬರ್ಗಾ ವಿಶ್ವವಿದ್ಯಾಲಯದ ಪರಿನಿಯಮಾವಳಿಗಳನ್ನು ಅಳವಡಿಸಿಕೊಂಡು ಪ್ರತಿ ಅಧ್ಯಯನ ಪೀಠಕ್ಕೆ ಅಗತ್ಯವಿರುವ ರೂ. 250 ಲಕ್ಷಗಳಂತೆ ಮೇಲಿನ ಏಳು ಅಧ್ಯಯನ ಪೀಠಗಳಿಗೆ ಒಟ್ಟು ರೂ. 1750 ಲಕ್ಷಗಳ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತೀರ್ಮಾನಿಸಲಾಯಿತು.

**ವಿಷಯ ಕ್ರಮಾಂಕ (4) :**

2025–26ನೇ ಶೈಕ್ಷಣಿಕ ಸಾಲಿನ ಪಿಎಚ್.ಡಿ ಪದವಿಗೆ ಅಧಿಸೂಚನೆ ಹೊರಡಿಸಲು ಅನುಮೋದನೆ ಕುರಿತು.

**ನಿರ್ಣಯ:** ಈ ವಿಷಯ ಕುರಿತು ಸುದೀರ್ಘವಾಗಿ ಚರ್ಚಿಸಲಾಯಿತು. ವಿದ್ಯಾವಿಷಯಕ ಪರಿಷತ್ ಸದಸ್ಯರಾದ ಶ್ರೀ ಈರಣ್ಣ ಪೂಜಾರಿ ಯವರು ಸಂಯೋಜಿತ ಕಾಲೇಜುಗಳ ಪ್ರಾಧ್ಯಾಪಕರನ್ನು Ph.D. ಸಂಶೋಧನಾ ಮಾರ್ಗದರ್ಶಕರನ್ನಾಗಿ ಗುರುತಿಸಿ ಅವಕಾಶ ನೀಡುವಂತೆ ಕೋರಿದರು. ಅದಕ್ಕೆ ಸಂಬಂಧಿಸಿದಂತೆ, ವಿಜ್ಞಾನ ನಿಕಾಯದ ಡೀನರಾದ ಡಾ. ಸುಯಮೀಂದ್ರ ಕುಲಕರ್ಣಿ ಯವರು ಮುಂದಿನ ದಿನಗಳಲ್ಲಿ Doctoral Committee ರಚನೆಯಾದ ನಂತರ ಅಗತ್ಯತೆಯನುಸಾರ ಸಂಶೋಧನಾ ಮಾರ್ಗದರ್ಶಕರನ್ನು ಯುಜಿಸಿ ಮತ್ತು ವಿಶ್ವವಿದ್ಯಾಲಯದ ನಿಯಮಾನುಸಾರ ಮಾಡಲಾಗುವುದು ಎಂದು ತಿಳಿಸಿದರು.

ಚರ್ಚೆಯ ಎಲ್ಲಾ ಅಂಶಗಳನ್ನು ಗಮನಿಸಿದ ಸಭೆಯು 2025–2026ನೇ ಶೈಕ್ಷಣಿಕ ಸಾಲಿಗೆ ಪಿಎಚ್.ಡಿ ಪದವಿಗೆ ಅರ್ಜಿಗಳನ್ನು ಆಹ್ವಾನಿಸಲು ಅನುಮೋದಿಸಲಾಯಿತು.

**ವಿಷಯ ಕ್ರಮಾಂಕ (5) :**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಹೊಸದಾಗಿ 27 ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಸ್ಥಾಪಿಸುವ ಕುರಿತು.

**ನಿರ್ಣಯ:** ಈ ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ ಸಿದ್ದಪ್ಪ ಇವರು ಪ್ರಸ್ತಾಪಿಸಿದ ಎಂ.ಎ. ಇನ್ ಎಜುಕೇಶನ್ ಪದವಿಯನ್ನು, ಇನ್ನೋರ್ವ ಸದಸ್ಯರಾದ ಶ್ರೀ ಮೇಟಿಯವರು ಪ್ರಸ್ತಾಪಿಸಿದ ಎಂ.ಎ. ಇನ್ ಜಿಯೋಗ್ರಾಫಿ, ಕುಲಸಚಿವರು (ಮೌಲ್ಯಮಾಪನ) ಇವರು ಪ್ರಸ್ತಾಪಿಸಿದ ಎಂ.ಎಸ್.ಸಿ ಇನ್ ಫುಡ್ & ನ್ಯೂಟ್ರೇಶನ್ ಟೆಕ್ನಾಲಾಜಿ, ವಿಜ್ಞಾನ ನಿಕಾಯದ ಡೀನರು ಪ್ರಸ್ತಾಪಿಸಿದ ಎಂ.ಎಸ್.ಸಿ ಅಪ್ಲಾಯಡ್ ಜೆನೆಟಿಕ್ಸ್ ಮತ್ತು ಜೆನೆಟಿಕ್ ಕೌನ್ಸಲಿಂಗ್ ಪದವಿಗಳನ್ನು ಈ ಭಾಗದ ಶೈಕ್ಷಣಿಕ ಹಿತದೃಷ್ಟಿಯಿಂದ ಹಾಗೂ ಬೇಡಿಕೆ ಇರುವ, ಮತ್ತು ಈಗಾಗಲೇ ಸಂಯೋಜಿತ ಕಾಲೇಜುಗಳಲ್ಲಿ ನಡೆಸಲಾಗುತ್ತಿರುವ ಸ್ನಾತಕ ಪದವಿಗಳನ್ವಯ ಮತ್ತು ವಿದ್ಯಾರ್ಥಿಗಳ ಲಭ್ಯತೆಗೆ ಅನುಗುಣವಾಗಿ ಈ ಕೆಳಗಿನ ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸಲು ಸರ್ಕಾರದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸುವಂತೆ ತೀರ್ಮಾನಿಸಲಾಯಿತು.

| ಕ್ರ. ಸಂ. | ಪ್ರಸ್ತಾಪಿತ ನೂತನ ಸ್ನಾತಕೋತ್ತರ ಪದವಿಗಳು |
|---|---|
| 1 | M.A. in Linguistics |
| 2 | M.A. in Hindi |
| 3 | M.Sc. in Business Analytics and Economics |
| 4 | M.Sc. in Wild Life Management |
| 5 | Master of Physical Education (M.P.Ed.) |
| 6 | Master of Education (M.Ed.) |
| 7 | Master of Business Administration (M.B.A) |
| 8 | Master of Computer Application (M.C.A) |
| 9 | M.A in Folklore |
| 10 | M.Sc. in Food & Nutrition Technology |
| 11 | M.A. in Hotel Management |

| | |
|---|---|
| 12 | M.Sc. in Bio-Chemistry |
| 13 | M.Sc in Bio-Technology |
| 14 | Master of Fine Arts |
| 15 | M.A in Psychology |
| 16 | M.A in Philosophy |
| 17 | M.A Public Administration |
| 18 | M.Sc in Geography |
| 19 | M.Sc in Artificial Intelligence & Machine Learning |
| 20 | M.A in History & Archaeology |
| 21 | M.Sc in Seeds Technology |
| 22 | M.Sc in Cyber Security & Digital Forensic |
| 23 | M.Sc in Environmental Science and Sustainability |
| 24 | Master of Tourism Administration |
| 25 | M.A in Education |
| 26 | M.A in Geography |
| 27 | M.Sc in Applied Genetics and Genetic Counselling |

ಮೇಲ್ಕಂಡ ಕೋರ್ಸ್‌ಗಳನ್ನು ಸ್ಥಾಪಿಸಲು ಸಭೆಯು ಚರ್ಚಿಸಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದಿಸಿತು.

**ವಿಷಯ ಕ್ರಮಾಂಕ (6) :**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವದ (Convocation) ಕುರಿತು.

**ನಿರ್ಣಯ:** ಈ ವಿಷಯ ಕುರಿತು ಸಭೆಯಲ್ಲಿ ಚರ್ಚಿಸಲಾಗಿ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವವನ್ನು ಶೀಘ್ರದಲ್ಲಿಯೇ ಆಯೋಜಿಸುವಂತೆ ಸರ್ವಾನುಮತದಿಂದ ಒಪ್ಪಲಾಯಿತು. ಮುಂದುವರೆದು, ಕುಲಸಚಿವರು (ಮೌಲ್ಯಮಾಪನ) ಇವರು ಕಾನ್ವೋಕೇಶನ್ಸ್ ಸ್ಟ್ಯಾಚುಟ್ ಅನ್ನು ಸಿದ್ಧಪಡಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಸಭೆಗೆ ಕೋರಿದರು. ಮಾತೃ ವಿಶ್ವವಿದ್ಯಾಲಯವಾದ ಗುಲಬರ್ಗಾ ವಿಶ್ವವಿದ್ಯಾಲಯದ ಪರಿನಿಯಮಾವಳಿಗಳನ್ನು ಅಳವಡಿಸಿಕೊಂಡು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ ಘಟಿಕೋತ್ಸವವನ್ನು ಆಯೋಜಿಸಲು ಈ ಮೇಲಿನಂತೆ ಅನುಮೋದಿಸಿತು.

**ವಿಷಯ ಕ್ರಮಾಂಕ (7) :**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಪುತ್ಥಳಿಯ ಸ್ಥಾಪನೆಯ ಕುರಿತು.

**ನಿರ್ಣಯ:** ಪ್ರಸ್ತಾವನೆ: ಸರ್ಕಾರದ ಆದೇಶದಂತೆ ರಾಯಚೂರು ವಿಶ್ವವಿದ್ಯಾಲಯವನ್ನು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯವೆಂದು ಮರುನಾಮಕರಣ ಮಾಡಲಾಗಿದ್ದು ಮಹರ್ಷಿ ವಾಲ್ಮೀಕಿ ಹೆಸರಿನಲ್ಲಿ ಉದ್ಯಾನವನವನ್ನು ನಿರ್ಮಿಸಲು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಶಂಕುಸ್ಥಾಪನೆ ನೆರವೇರಿಸಿದ್ದು ರಾಜ್ಯದ ಇತರೆ ವಿಶ್ವವಿದ್ಯಾಲಯಗಳಂತೆ ವಿಶ್ವವಿದ್ಯಾಲಯದ ಹೆಸರಿಗೆ ಅನ್ವಯವಾಗುವಂತೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿಯವರ ಪುತ್ಥಳಿಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿ ಸ್ಥಾಪಿಸುವಂತೆ ಚರ್ಚಿಸಲಾಯಿತು. ಮೇಲಿನ ಚರ್ಚೆಯನ್ವಯ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಕ್ರಮಾಂಕ (8) :**

2025–26ನೇ ಶೈಕ್ಷಣಿಕ ಸಾಲಿಗೆ ಪಿಎಚ್.ಡಿ ಪ್ರವೇಶಾತಿ (Entrance)/ ಕೋರ್ಸವರ್ಕ್ ಪಠ್ಯಕ್ರಮ ರಚಿಸಲು ಅನುಮೋದನೆ ಕುರಿತು.

**ನಿರ್ಣಯ:** ಈ ವಿಷಯ ಕುರಿತು ಚರ್ಚಿಸಲಾಗಿ ಮಾತೃ ವಿಶ್ವವಿದ್ಯಾಲಯವಾದ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸ್ತುತ ಚಾಲ್ತಿಯಲ್ಲಿರುವ ಪರಿನಿಯಮಾವಳಿಗಳನ್ನು ಅಳವಡಿಸಿಕೊಳ್ಳುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿ ಅನುಮೋದಿಸಿತು.

**ವಿಷಯ ಕ್ರಮಾಂಕ (9) :**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದಲ್ಲಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದಲ್ಲಿ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸುವ ಕುರಿತು.

**ನಿರ್ಣಯ:** ಸದರಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಜೊತೆಗೆ ಯೋಗ, ಸಂಗೀತ, ಕಂಪ್ಯೂಟರ್ ಅಪ್ಲಿಕೇಶನ್, ಏ.ಆಯ್. & ಎಂ.ಎಲ್., ಫುಡ್ & ಹೋಟಲ್ ಮ್ಯಾನೇಜ್ಮೆಂಟ್, ಮತ್ತು ಇವೆಂಟ್ ಮ್ಯಾನೇಜ್‌ಮೆಂಟ್ ಈ ವಿಷಯಗಳಲ್ಲಿಯೂ ಸಹ ಡಿಪ್ಲೋಮಾ ಮತ್ತು ಸರ್ಟಿಫಿಕೇಟ್ ಕೋರ್ಸುಗಳನ್ನು ಪ್ರಾರಂಭಿಸಲು ಸರ್ವಾನುಮತದಿಂದ ಅನುಮೋದಿಸಲಾಯಿತು.

**<u>ಪೂರಕ ಕಾರ್ಯಸೂಚಿ ವಿಷಯಗಳು :</u>**

**ವಿಷಯ ಕ್ರಮಾಂಕ (10) :**

2025–26ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಸಂಲಗ್ನತೆ ಪ್ರಕ್ರಿಯೆಯಲ್ಲಿ 45ಕ್ಕಿಂತ ಕಡಿಮೆ ಅಂಕ ಪಡೆದ 27 ಕಾಲೇಜುಗಳಿಗೆ ನೋಟಿಸ್ ನೀಡಲಾಗಿದ್ದು ಸದರಿ ಕಾಲೇಜುಗಳಿಗೆ ಸ್ಥಳೀಯ ವಿಚಾರಣಾ ಸಮಿತಿ (LIC) ಮರು ತನಿಖೆ ಮಾಡಲಾಗಿದ್ದು. ಮುಂದುವರೆದು, 2025–26ನೇ ಶೈಕ್ಷಣಿಕ ಸಾಲಿನ ಮರು ತನಿಖೆ ಮಾಡಿದ ಮಹಾವಿದ್ಯಾಲಯಗಳಿಗೆ ಸಂಯೋಜನೆ ಮುಂದುವರಿಕೆಯ ಕುರಿತು.

**ನಿರ್ಣಯ:** ಈ ಹಿಂದಿನ ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್‌ನಲ್ಲಿ ಚರ್ಚಿಸಿದಂತೆ ವಿಶ್ವವಿದ್ಯಾಲಯವು ಜರುಗಿಸಿದ ಕ್ರಮವನ್ನು ಸಭೆಯು ಘಟನೋತ್ತರವಾಗಿ ಅನ್ವಯವಾಗಿರುವಂತೆ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಕ್ರಮಾಂಕ (11) :**

ಶ್ರೀ ಸಂಜೀವ ಶಿಕ್ಷಣ ಮಹಾವಿದ್ಯಾಲಯ, ಲಿಂಗಸ್ಗೂರು ಈ ಮಹಾವಿದ್ಯಾಲಯವು NCTE ಯಿಂದ De-recognition ಆಗಿರುವುದರಿಂದ ವಿಶ್ವವಿದ್ಯಾಲಯವು ನೀಡಿರುವ ಸಂಯೋಜನಾ ಮುಂದುವರೆಕೆ ಆದೇಶ ಹಿಂಪಡೆಯುವ ಕುರಿತು.

**ನಿರ್ಣಯ:** ಈ ಕುರಿತು ಚರ್ಚಿಸಲಾಗಿ ಸದರಿ ಮಹಾವಿದ್ಯಾಲಯಕ್ಕೆ ನೀಡಿರುವ ಸಂಯೋಜನಾ ಮುಂದುವರೆಕೆ ಆದೇಶವನ್ನು ತಾತ್ಕಾಲಿಕವಾಗಿ ಹಿಂಪಡೆಯಲು ಸರ್ವಾನುಮತದಿಂದ ಅನುಮೋದಿಸಲಾಯಿತು.

**ವಿಷಯ ಕ್ರಮಾಂಕ (13) :**

2025–26ನೇ ಸಾಲಿನ ಆದರ್ಶ ಪದವಿ ಮಹಾವಿದ್ಯಾಲಯ, ಯಾದಗಿರಿ ಇವರ ಸಂಯೋಜನೆಯನ್ನು ಹಿಂಪಡೆಯುವ ಕುರಿತು.

**ನಿರ್ಣಯ:** ಆದರ್ಶ ಪದವಿ ಮಹಾವಿದ್ಯಾಲಯ, ಯಾದಗಿರಿ ಈ ಮಹಾವಿದ್ಯಾಲಯದಲ್ಲಿ 2025–26ನೇ ಸಾಲಿನ 3 & 5ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ತಮ್ಮ ಪ್ರವೇಶಾತಿಗೆ ಸಂಬಂಧಿಸಿದಂತೆ ಸದರಿ ಮಹಾವಿದ್ಯಾಲಯವು ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ ಮತ್ತು ಸದರಿ ಮಹಾವಿದ್ಯಾಲಯವು ಸ್ಥಗಿತಗೊಂಡಿದ್ದು ಪ್ರಾಂಶುಪಾಲರು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಸದರಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕುಲಸಚಿವರಿಗೆ ದೂರು ನೀಡಿರುತ್ತಾರೆ. ಈ ದೂರಿನನ್ವಯ ಸದರಿ ಕಾಲೇಜಿಗೆ ಉತ್ತರ ಸಲ್ಲಿಸುವಂತೆ ಪತ್ರ ಬರೆದರೂ ಸಹ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಈ ಕುರಿತು ಸಭೆಯಲ್ಲಿ ಚರ್ಚಿಸಲಾಗಿ ಸದರಿ ಕಾಲೇಜಿನ ವಿದ್ಯಾರ್ಥಿಗಳ ಭವಿಷ್ಯದ ಶೈಕ್ಷಣಿಕ ಹಿತದೃಷ್ಟಿಯಿಂದ ಸದರಿ ಮಹಾವಿದ್ಯಾಲಯದ

ಸಂಯೋಜನೆಯನ್ನು ಹಿಂಪಡೆದು ಅಲ್ಲಿಯ ವ್ಯಾಸಂಗನಿರತ ವಿದ್ಯಾರ್ಥಿಗಳನ್ನು ಹತ್ತಿರದ ಸರ್ಕಾರಿ ಪದವಿ ಮಹಾವಿದ್ಯಾಲಯಕ್ಕೆ ವರ್ಗಾಯಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಕ್ರಮಾಂಕ (14) :**

2025–26 ನೇ ಶೈಕ್ಷಣಿಕ ಸಾಲಿಗೆ ಶ್ರೀ ಸಾಯಿ ಪದವಿ ಮಹಾವಿದ್ಯಾಲಯ, ಶಹಾಪೂರ ಹಾಗೂ ಸಜ್ಜಲಶ್ರೀ ವಾಣಿಜ್ಯ ಪದವಿ ಮಹಾವಿದ್ಯಾಲಯ, ನಾಗರಾಳ ಕಾಲೇಜಿನ ಸಂಯೋಜನಾ ಮುಂದುವರಿಕೆಯನ್ನು ಹಿಂಪಡೆಯುವ ಕುರಿತು.

**ಸಭೆಯ ನಿರ್ಣಯ:**

2025–26 ನೇ ಸಾಲಿನಲ್ಲಿ ಸಂಯೋಜನಾ ಪ್ರಕ್ರಿಯೆಯಲ್ಲಿ ತಾತ್ಕಾಲಿಕ ಸಂಯೋಜನೆಗೆ ಮುಂದುವರಿಕೆಗೆ ಕನಿಷ್ಠ 45 ಸಂಯೋಜನಾ ಅಂಕಗಳನ್ನು ನಿಗದಿಪಡಿಸಿದ್ದು, ಶ್ರೀ ಸಾಯಿ ಪದವಿ ಮಹಾವಿದ್ಯಾಲಯ, ಶಹಾಪೂರ 36.22% ಅಂಕಗಳನ್ನು ಗಳಿಸಿದ್ದು ಮಹಾವಿದ್ಯಾಲಯಗಳ ಮನವಿ ಮೇರೆಗೆ ಮರು ಎಲ್.ಐ.ಸಿ ತನಿಖೆಗೆ ಶುಲ್ಕವನ್ನು ಪಾವತಿಸಿ ಅವಕಾಶ ಮಾಡಿ ಎಲ್.ಐ.ಸಿ ತಂಡವನ್ನು ಮಹಾವಿದ್ಯಾಲಯಗಳಿಗೆ ಕಳುಹಿಸಿಕೊಡಲಾಗುವುದು ಎಂದು ತಿಳಿಸಲಾಗಿತ್ತು. ಆದರೆ ಮಹಾವಿದ್ಯಾಲಯವು ಮರು ತನಿಖಾ ಶುಲ್ಕವನ್ನು ಭರಿಸದೇ ಇದ್ದಲ್ಲಿ ತಮ್ಮ ಕಾಲೇಜಿನ ಸಂಯೋಜನೆಯನ್ನು 16.07.20205 ರಂದು ವಿಶ್ವವಿದ್ಯಾಲಯದಿಂದ ಕಳುಹಿಸಿದ ಪತ್ರದಲ್ಲಿ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಮುಂದುವರಿಕೆಯನ್ನು ಹಿಂಪಡೆಯಲಾಗುತ್ತದೆ ಎಂದು ಸೂಚಿಸಲಾಗಿರುತ್ತು.

ಅದೇ ರೀತಿ ಸಜ್ಜಲಶ್ರೀ ವಾಣಿಜ್ಯ ಪದವಿ ಮಹಾವಿದ್ಯಾಲಯ, ನಾಗರಾಳ 29.32% ಅಂಕಗಳನ್ನು ಗಳಿಸಿದ್ದು ಮಹಾವಿದ್ಯಾಲಯಗಳ ಮನವಿ ಮೇರೆಗೆ ಮರು ಎಲ್.ಐ.ಸಿ ತನಿಖೆಗೆ ಶುಲ್ಕವನ್ನು ಪಾವತಿಸಿ ಅವಕಾಶ ಮಾಡಿ ಎಲ್.ಐ.ಸಿ ತಂಡವನ್ನು ಮಹಾವಿದ್ಯಾಲಯಗಳಿಗೆ ಕಳುಹಿಸಿಕೊಡಲಾಗುವುದು ಎಂದು ತಿಳಿಸಲಾಗಿತ್ತು. ಆದರೆ ಮಹಾವಿದ್ಯಾಲಯವು ಮರು ತನಿಖಾ ಶುಲ್ಕವನ್ನು ಭರಿಸದೇ ಇದ್ದಲ್ಲಿ ತಮ್ಮ ಕಾಲೇಜಿನ ಸಂಯೋಜನೆಯನ್ನು 16.07.2025 ರಂದು ವಿಶ್ವವಿದ್ಯಾಲಯದಿಂದ ಕಳುಹಿಸಿದ ಪತ್ರದಲ್ಲಿ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಮುಂದುವರಿಕೆಯನ್ನು ಹಿಂಪಡೆಯಲಾಗುತ್ತದೆ ಎಂದು ಸೂಚಿಸಲಾಗಿರುತ್ತು. ಆದರೆ ಎರಡೂ ಕಾಲೇಜುಗಳವರು ಮರು ಎಲ್.ಐ.ಸಿ. ತನಿಖೆಗಾಗಿ ನಿರಾಸಕ್ತಿ ತೋರಿಸಿ ಅರ್ಜಿ ಸಲ್ಲಿಸದೇ ಇರುವುದರಿಂದ ವಿಶ್ವವಿದ್ಯಾಲಯದ ನಿಯಮಾನುಸಾರ ಕ್ರಮಕೈಗೊಳ್ಳಲು ಸಭೆಯು ಸೂಚಿಸದ್ದರಿಂದ ಸಭೆಯು ಈ ಕೆಳಗಿನಂತೆ ನಿರ್ಣಯಿಸಿತು.

ಮೇಲಿನ ಎರಡೂ ಕಾಲೇಜುಗಳ ಸಂಯೋಜನಾ ಮಾನ್ಯತೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿದು 2025–26 ನೇ ಶೈಕ್ಷಣಿಕ ಸಾಲಿಗೆ ಯಾವುದೇ ಪ್ರವೇಶಾತಿಯನ್ನು ಮಾಡಿಕೊಳ್ಳದಂತೆ ಸೂಚಿಸಲು ಸಭೆಯು ಅನುಮೋದಿಸಿತು.

**ವಿಷಯ ಕ್ರಮಾಂಕ (15) :**

2024–25ನೇ ಆರ್ಥಿಕ ಸಾಲಿನ ಲೆಕ್ಕಪತ್ರ (Annual Account) ಅನುಮೋದಿಸುವ ಕುರಿತು.

**ನಿರ್ಣಯ:** ದಿನಾಂಕ 30.05.2025 ರಂದು ನಡೆದ ಹಣಕಾಸು ಸಮಿತಿ ಸಭೆಯು ಅನುಮೋದಿಸಿದ 2024–25ನೇ ಆರ್ಥಿಕ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

**ವಿಷಯ ಕ್ರಮಾಂಕ (16) :**

2025–26ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ಅನುಮೋದಿಸುವ ಕುರಿತು.

**ನಿರ್ಣಯ:** ದಿನಾಂಕ 02.08.2025 ರಂದು ನಡೆದ ಹಣಕಾಸು ಸಮಿತಿ ಸಭೆಯು ಅನುಮೋದಿಸಿದ 2025–26ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜನ್ನು ಸಭೆಯು ಪರಿಶೀಲಿಸಿ ಅನುಮೋದಿಸಿತು.

**ವಿಷಯ ಕ್ರಮಾಂಕ (17) :**

ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳನ್ನು ಹಾಗೂ ರ್‍ಯಾಂಕ್‌ಗಳನ್ನು ಅನುಮೋದಿಸುವ ಕುರಿತು.

**ಸಭೆಯ ನಿರ್ಣಯ:** 2021–22ನೇ ಶೈಕ್ಷಣಿಕ ಸಾಲಿನ 20 ವಿವಿಧ ಸ್ನಾತಕೋತ್ತರ ಪದವಿಗಳಿಗೆ (MA/MSc/MCom) ಪ್ರತಿ ವಿಭಾಗಕ್ಕೆ 10 ರ್‍ಯಾಂಕಗಳಂತೆ ಪಟ್ಟಿಯನ್ನು ಮತ್ತು ಬಿಎಡ್ ಮತ್ತು ಬಿಪಿಎಡ್ ಸ್ನಾತಕ ಪದವಿಗಳಿಗೆ ಪ್ರತಿ ಕೋರ್ಸಿಗೆ ತಲಾ 10 ರ್‍ಯಾಂಕ್‌ಗಳಂತೆ ಪಟ್ಟಿಯನ್ನುಅನುಮೋದಿಸಲಾಯಿತು.

**<u>ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳ ಚರ್ಚೆ:</u>**

**ವಿಷಯ ಕ್ರಮಾಂಕ (18) :**

2025–26ನೇ ಶೈಕ್ಷಣಿಕ ಸಾಲಿಗೆ ವಿಶ್ವವಿದ್ಯಾನಿಲಯದ ಒಟ್ಟು 20 ಸ್ನಾತಕೋತ್ತರ ಕೋರ್ಸ್‌ಗಳ ಅಧ್ಯಯನ ಮಂಡಳಿಗಳನ್ನು ರಚಿಸುವ ಕುರಿತು.

**ನಿರ್ಣಯ:** ವಿಶ್ವವಿದ್ಯಾನಿಲಯದ ಒಟ್ಟು 20 ಸ್ನಾತಕೋತ್ತರ ಕೋರ್ಸ್‌ಗಳ ಅಧ್ಯಯನ ಮಂಡಳಿಗಳನ್ನು ರಚಿಸಲು ಸಭೆಯು ಅನುಮೋದಿಸಲಾಯಿತು. ಮುಂದುವರೆದು, ಸದರಿ ಮಂಡಳಿಗಳು ರಚಿಸುವ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಅನುಮೋದಿಸಲಾಯಿತು.

**ವಿಷಯ ಕ್ರಮಾಂಕ (19) :**

ವಿಶ್ವವಿದ್ಯಾಲಯದ ವಿವಿಧ ಅಧ್ಯಯನ ವಿಭಾಗಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅರ್ಹತಾ ಮಾನದಂಡದಲ್ಲಿ ಯುಜಿಸಿ ಹಾಗೂ ವಿಶ್ವವಿದ್ಯಾಲಯದ ಪರಿನಿಯಮಾವಳಿಯಂತೆ ಅರ್ಹತಾ ಪದವಿಯನ್ನು ಅಲೈಡ್/ರೆಲೆವೆಂಟ್/ಕನ್ಸರ್ನಡ್ ವಿಷಯಗಳಲ್ಲಿ ಸ್ನಾತಕೋತ್ತರ ಪದವಿಯನ್ನು ಪರಿಗಣಿಸುವ ಕುರಿತು.

**ನಿರ್ಣಯ:** ಮೇಲಿನ ವಿಷಯ ಕುರಿತು ಚರ್ಚಿಸಲಾಗಿ ಸದರಿ ಅರ್ಹತಾ ಪದವಿಗಳನ್ನು UGC-NET ರೀತಿಯಲ್ಲಿ Allied/ Relevant/ Concerned ಎಂದು ಪರಿಗಣಿಸಲು ಸಭೆಯು ಅನುಮೋದಿಸಿತು.

ಸಭೆಯ ಕೊನೆಯಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳಿಗೆ, ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ಸದಸ್ಯರಿಗೆ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| 10/9 | 10-9-25 |
| **ಡಾ. ಎ. ಚನ್ನಪ್ಪ., ಕೆ.ಎ.ಎಸ್.** | **ಪ್ರೊ. ಶಿವಾನಂದ ಕೆಳಗಿನಮನಿ** |
| ಕುಲಸಚಿವರು | ಕುಲಪತಿಗಳು |